**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಆಯುಕ್ತರ ಕಛೇರಿಯ ನಡಾವಳಿಗಳು**

ವಿಷಯ: ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ **ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ**ಗಳಲ್ಲಿ ನಿರ್ವಹಿಸುತ್ತಿರುವ ಬೋಧಕರ ವರ್ಗಾವಣೆ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020 ದಿನಾಂಕ: 29-01-2021 ಅಧಿಸೂಚಿಸಲಾದ ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ ನಿಯಮಗಳು-2021 ಹಾಗೂ ತಿದ್ದುಪಡಿಗಳು.
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 17 ಇಎಸ್‌ಟಿ (8) 2024 ದಿ:03-04-2025 ಹಾಗೂ ದಿ:21-04-2025.
3. ಈ ಕಛೇರಿ ಪ್ರಕಟಣೆ ಸಂಖ್ಯೆ: ಡಿಟಿಇ 03 ಇಎಸ್‌ಟಿ (8) 2025 ದಿ:19-05-2025.
4. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 03 ಇಎಸ್‌ಟಿ (8) 2025 ದಿ:10-06-2025.
5. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 03 ಇಎಸ್‌ಟಿ (8) 2025 ದಿ:27-06-2025.
6. ಸರ್ಕಾರದ ಅನಧಿಕೃತ ಟಿಪ್ಪಣಿ ಸಂ:ಸಿಆಸುಇ55ಸೇವನ 2025ದಿ:11.06.2025.
7. ಸರ್ಕಾರದ ಪತ್ರ ಸಂ. ಇಡಿ 162 ವಿವಿಧ 2025 ದಿ:24.06.2025.
8. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 03 ಇಎಸ್‌ಟಿ(8) 2025 ದಿ:05.07.2025ರಂದು ಪ್ರಕಟಿಸಲಾದ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿ.
9. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 03 ಇಎಸ್‌ಟಿ(8) 2025 ದಿ:05.07.2025 (ವರ್ಗಾವಣೆ ಸಂಬಂಧಿಸಿದ ಸೂಚನೆಗಳು)

******

ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರ ವರ್ಗಾವಣೆಗಳನ್ನು ನಿಯಂತ್ರಿಸುವ ಸಲುವಾಗಿ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ) ನಿಯಮಗಳು-2021 ಅನ್ನು ರೂಪಿಸಿ ಉಲ್ಲೇಖ-(1)ರಂತೆ ಅಧಿಸೂಚಿಸಿ ದಿನಾಂಕ:29.01.2021ರಿಂದ ಜಾರಿಗೊಳಿಸಲಾಗಿರುತ್ತದೆ.

ಸದರಿ ವರ್ಗಾವಣೆ ನಿಯಮಗಳ ನಿಯಮ 8 ರಲ್ಲಿ ಸಾರ್ವಜನಿಕ ಹಿತದೃಷ್ಟಿಯ ಕಡ್ಡಾಯ ವರ್ಗಾವಣೆ ಹಾಗೂ ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಗಳನ್ನು ಪ್ರತಿ ಕ್ಯಾಲಂಡರ್ ವರ್ಷದ ಮೇ ಮತ್ತು ಜುಲೈ ಮಾಹೆಯ ನಡುವೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.

ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಮಗಳಲ್ಲಿನ ಅವಕಾಶಗಳನ್ನಯ ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಗೆ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಬಯಸುವ ಬೋಧಕರಿಂದ ಆನ್‌ಲೈನ್ ಮೂಲಕ ನಿಗದಿತ ಕೊನೆಯ ದಿನಾಂಕದೊಳಗೆ ಸ್ವೀಕೃತವಾದ, ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಯ ಅರ್ಜಿ ಹಾಗೂ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಕೋರಲಾದ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ ವಿಶೇಷ ಪ್ರಕರಣಗಳಡಿ ಕೋರಿಕೆ ವರ್ಗಾವಣೆಗೆ ಅರ್ಹರಿರುವ ಬೋಧಕರ ಮತ್ತು ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆ ಮೇರೆಗೆ ಕಡ್ಡಾಯ ವರ್ಗಾವಣೆಗೆ ಒಳಪಡುವ ಬೋಧಕರ ಅಂತಿಮ ಆದ್ಯತಾ ಪಟ್ಟಿಗಳನ್ನು ತಯಾರಿಸಿ ದಿನಾಂಕ:08.07.2025 ರಂದು ಆನ್‌ಲೈನ್ ಮೂಲಕ ಕೌನ್ಸಿಲಿಂಗ್ ನಡೆಸಿದ್ದು, ಸದರಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಸ್ಥಳ ಆಯ್ಕೆ ಮಾಡಿಕೊಂಡ ಬೋಧಕರುಗಳನ್ನು ಅವರು ಆಯ್ಕೆ ಮಾಡಿಕೊಂಡ ಕಾಲೇಜುಗಳಿಗೆ ವರ್ಗಾಯಿಸಲು ಈ ಆದೇಶ.

**ಆದೇಶ ಸಂಖ್ಯೆ: ತಾಶಿಇ:03:ಇಎಸ್‌ಟಿ(8) 2025: ಬೆಂಗಳೂರು ದಿನಾಂಕ:09.07.2025** | 696

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ದಿನಾಂಕ:08.07.2025 ರಂದು ನಡೆದ **ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ**ಗಳಲ್ಲಿ ಬೋಧಕರ ಆನ್‌ಲೈನ್ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಸ್ಥಳ ಆಯ್ಕೆ ಮಾಡಿಕೊಂಡ ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆ ಮತ್ತು ಸಾರ್ವಜನಿಕ ಹಿತಾಸಕ್ತಿಯ ಕಡ್ಡಾಯ ವರ್ಗಾವಣೆಗೊಂಡ ಬೋಧಕರನ್ನು ಅನುಬಂಧದಲ್ಲಿ ನೀಡಿರುವಂತೆ ಅವರ ಹೆಸರಿನ ಮುಂದೆ ನಮೂದಿಸಿರುವ ಕಾಲೇಜುಗಳಿಗೆ ವರ್ಗಾಯಿಸಿ ಆದೇಶಿಸಿದೆ.

**ಸೂಚನೆಗಳು:**

1. ಅನುಬಂಧದಲ್ಲಿರುವ ವರ್ಗಾವಣೆಗೊಂಡ ಬೋಧಕರನ್ನು ದಿನಾಂಕ:11.07.2025ರ ಅಪರಾಹ್ನದಿಂದ ಅನ್ವಯಿಸುವಂತೆ ಮಾತ್ರ ಕಾಲೇಜಿನ ಕರ್ತವ್ಯದಿಂದ ಬಿಡುಗಡೆಗೊಳಿಸಿ. ಆದೇಶಿಸಲಾಗಿದ್ದು

Scanned with CamScanner

ಸದರಿಯವರುಗಳು ವರ್ಗಾವಣೆ ಆದೇಶದ ಪ್ರತಿಯೊಂದಿಗೆ ವರ್ಗಾವಣೆಗೊಂಡ ಕಾಲೇಜಿನಲ್ಲಿ ವರದಿ ಮಾಡಿಕೊಳ್ಳುವಂತೆ ಸೂಚಿಸಿದೆ.

2. ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಕಡ್ಡಾಯ ವರ್ಗಾವಣೆಗೊಂಡ ಬೋಧಕರು ಕೆ.ಸಿ.ಎಸ್.ಆರ್. ನಿಯಮಾನುಸಾರ ಅನ್ವಯವಾಗುವ ಸೇರುವಿಕೆ ಕಾಲ (Joining time) ಹಾಗೂ ವರ್ಗಾವಣೆ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.
3. ವಿಶೇಷ ಪ್ರಕರಣಗಳಡಿ ಕೋರಿಕೆ ಮೇರೆಗೆ ವರ್ಗಾವಣೆಗೊಂಡ ಬೋಧಕರು ಸೇರುವಿಕೆ ಅವಧಿ (Joining time) ಹಾಗೂ ವರ್ಗಾವಣೆ ಭತ್ಯೆಗಳನ್ನು ಪಡೆಯಲು ಅರ್ಹರಿರುವುದಿಲ್ಲ.
4. ವರ್ಗಾವಣೆ ಹೊಂದಿದ ಬೋಧಕ ವರ್ಗದವರು ಜುಲೈ-2025 ಮಾಹೆಯ ವೇತನವನ್ನು ಅವರನ್ನು ವರ್ಗಾಯಿಸಿದ ಸಂಸ್ಥೆಯಲ್ಲಿ ಪಡೆಯತಕ್ಕದ್ದು.
5. ವರ್ಗಾವಣೆಗೊಂಡ ಬೋಧಕರುಗಳು ಪ್ರಾಂಶುಪಾಲರ ಪ್ರಭಾರವನ್ನು ನಿರ್ವಹಿಸುತ್ತಿದ್ದಲ್ಲಿ ಪ್ರಾಂಶುಪಾಲರ ಪ್ರಭಾರವನ್ನು ಸದರಿ ಕಾಲೇಜಿನ ಹಿರಿಯ ಪ್ರಾಧ್ಯಾಪಕರು, ಸಹ/ ಸಹಾಯಕ ಪ್ರಾಧ್ಯಾಪಕರಿಗೆ ವಹಿಸಿ ಬಿಡುಗಡೆಗೊಳ್ಳುವುದು.
6. ವರ್ಗಾವಣೆ ಆದೇಶದಲ್ಲಿನ ಬೋಧಕರು ಪ್ರಸೂತಿ ರಜೆ ಮೇಲಿದ್ದಲ್ಲಿ ರಜೆಯ ನಂತರ ವರ್ಗಾವಣೆಗೊಂಡ ಕಾಲೇಜಿನಲ್ಲಿ ನೇರವಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು. ಅಲ್ಲಿಯವರೆಗೂ ವರ್ಗಾವಣೆ ಪೂರ್ವ ಕಾಲೇಜಿನಲ್ಲಿಯೇ ವೇತನವನ್ನು ಪಾವತಿಸುವುದು.
7. ವರ್ಗಾವಣೆ ಆದೇಶದಲ್ಲಿರುವ ಬೋಧಕರು ಅನ್ಯ ಕಛೇರಿ ಕರ್ತವ್ಯದ ಮೇರೆಗೆ ಇತರೆ ಕಛೇರಿ/ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಅಂತಹ ಬೋಧಕರ ಅನ್ಯ ಕಛೇರಿ ಕರ್ತವ್ಯವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

Manjula

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಇವರಿಗೆ:

1. ಮೇಲ್ಕಂಡ ಬೋಧಕ ವರ್ಗದವರಿಗೆ (ಸಂಬಂಧಪಟ್ಟ ಪ್ರಾಂಶುಪಾಲರ/ಅಧಿಕಾರಿಗಳ ಮೂಲಕ).
2. ಸಂಬಂಧ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು-ಮಾಹಿತಿಗಾಗಿ.
3. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು-ಮಾಹಿತಿಗಾಗಿ.
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಜಂಟಿ ನಿರ್ದೇಶಕರು (ಆಡಳಿತ)/(ಸಿಡಿಸಿ)/(ತನಿಖೆ)/(ಪರೀಕ್ಷೆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಆಡಳಿತಾಧಿಕಾರಿ / ರಿಜಿಸ್ಟ್ರಾರ್(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು).
8. ಡಿವಿಪಿ (1) ಮತ್ತು (2), ಇಎಸ್‌ಟಿ (1), (3), (5), (7), (9) ಮತ್ತು (10) ವಿಭಾಗಗಳಿಗೆ.
9. ಆಯುಕ್ತರ ಆಪ್ತ ಶಾಖೆಗೆ.
10. ಕಛೇರಿ ಪ್ರತಿ.

Scanned with CamScanner

ಸಂಖ್ಯೆ: ಡಿಟಿಇ/03/ಇಎಸ್ ಟಿ(8)/2025 ದಿನಾಂಕ:09.07.2025 ರ ಅನುಬಂಧ

2025 ನೇ ಸಾಲಿನ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಹೊಂದಿದ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವರ್ಗದವರ ಪಟ್ಟಿ.

| SL No | KGID | Name | Discipline / Cadre | Present Working College | HK RK | Transferred College | Request / Public Interest |
|---|---|---|---|---|---|---|---|
| 1 | 1938140 | SUJATHA A | SOCIAL STUDIES | Government Junior Technical School,Hubballi | N | Government Junior Technical School ,Bhadravathi | REQUEST |
| 2 | 1983046 | RAVI H K | SCIENCE | Government Junior Technical School,Hubballi | N | Government Junior Technical School ,Bhadravathi | PUBLIC INTEREST |
| 3 | 1906960 | SHIVAYOGEPPA MATTIKATTI | ENGLISH | Government Junior Technical School,Bellari | N | Government Junior Technical School,Hubballi | PUBLIC INTEREST |
| 4 | 3026319 | RAKESHA CHAVANA | SCIENCE | Government Junior Technical School,Kalaburagi | Y | Government Junior Technical School,Bellari | PUBLIC INTEREST |

Manjula

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

Scanned with CamScanner